

ಬೈಲಹೊಂಗಲ ತುಂಬುಗೆರೆಯ ನೀರ ಸೊಬಗು. (ಒಳಚಿತ್ರ: ಬೈಲಹೊಂಗಲದ ತುಂಬುಗೆರೆ ಕಾಯಕಕ್ಕೆ ಮುಂಚೆ).

ನವಲಗುಂದದ ಹಣಶಿಕೆರೆಯ ಫಲವತ್ತಾದ ಹೂಳು ಒಯ್ಯಲು ರೈತರ ಪೈಪೋಟಿ, ಇದು ಕೆರೆ ಕಾಯಕಕ್ಕೆ ಸಹಕಾರಿ.



ಜಲಮನದ ಮುಖಾಮುಖಿಯಾಗುತ್ತದೆ. ಊರ ಬಯಲಿನ ನೀರು ಒಟ್ಟುಗೂಡಿಸಿ ನಿಂತು ಅಂತರ್ಜಲದ ಸೆಲೆ ಉಕ್ಕಿಸುವ ನೆಲೆಯೇ ಎಲ್ಲರಿಗೂ ನೆಮ್ಮದಿ ನೀಡುವ ತಾಣ, ಸಮಾಜದ ಎಲ್ಲರ ಸಮಾಗಮವಾಗಿದ್ದರಿಂದಲೇ ಕೆರೆ ಜನಪದ ವಿಶೇಷವಾಗಿದೆ. ನೀರು ನಂಬಿದ ಬೆಳೆ ವೈವಿಧ್ಯದಲ್ಲಿ ಊರು ಕಟ್ಟಿದ ಸಾಧ್ಯತೆಗಳಿವೆ, ವಲಸೆ ತಡೆಯುವ ಸೂತ್ರವಿದೆ. ಕೆರೆ ಸಮಿತಿಯ ಅಧ್ಯಕ್ಷರು, ಗ್ರಾಮಸ್ಥರು, ಹೊಲಕ್ಕೆ ಹೂಳು ಸಾಗಿಸಿದವರು, ದಂಡೆಯಲ್ಲಿ ಗಿಡ ಬೆಳೆಸಿದವರು, ಕೆರೆದೇವಿಯ ಗುಡಿಯ ಪೂಜಾರಿ, ಜನಪದ ಆಚರಣೆ, ಜಾತ್ರೆಯ ಕಥನಗಳಲ್ಲಿ ಕೆರೆ ನೀತಿ ಮತ್ತು ಪ್ರೀತಿಯ ಬೆರಗಿದೆ. ಒಂದು ಕಾಲದಲ್ಲಿ ಊರ ಕೆರೆಯತ್ತ ಮುಖ ಹಾಕದಿದ್ದವರು ಇಂದು ನೀರು ನಿಂತಾಗ ತಲೆದೂಗುತ್ತಾರೆ. ತಮ್ಮೂರಿನ ಕೆರೆಯ ಶುದ್ಧ ನೀರಿನಲ್ಲಿ ಮುಖ ನೋಡುತ್ತ ನೀರಿನ ಲಾಭ ವಿವರಿಸುವ ಹಂತಕ್ಕೆ ಏರಿದರೆಂದರೆ ಕಾರ್ಯದ ಹಿಂದಿನ ಪರಿಶ್ರಮ ತಿಳಿಯುತ್ತದೆ. ಗ್ರಾಮ ಗ್ರಾಮಗಳ ಸ್ಥಿತಿಗತಿಗಳ ಕೈಗನ್ನಡಿಯಾಗಿ ಕೆರೆಗಳ ಪಾತ್ರವಿದೆ.

ಬತ್ತಿದ ಕೆರೆಯಲ್ಲಿ ಮತ್ತೆ ನೀರು ಭರ್ತಿಯಾಗಿ ಬೆಳೆ ಚಿಗುರಿದಂತೆ ಕೆರೆ ಸುತ್ತಲಿನ ಸಂಸ್ಕೃತಿ ಮೈದಳೆಯುವುದೊಂದು ಮೋಹಕ ಲೋಕ. ಜಲಪಕ್ಷಿ, ತಾವರೆ ವೈವಿಧ್ಯ, ಜೀವ ಜಾಲದ ಆಟದಲ್ಲಿ ಖುಷಿಗೆ ಹಲವು ಮುಖಗಳಿವೆ. ಕೆರೆ ಕಾಯಕದ ಚಿತ್ರಗಳಲ್ಲಿ ಇಂಥ ಬೆರಗು ಗ್ರಾಮಕ್ಕೆ ಮರಳಿ ದಕ್ಕುತ್ತಿರುವಂತೆ ಭಾಸವಾಗುತ್ತಿದೆ.

## ನಿರ್ಮಾಣದ ಹಿಂದಿನ ಸೋಜಿಗ

ಚಿತ್ರದುರ್ಗದ ಹೊಳಲ್ಕೆರೆಯ ಕೆಂಗುಂಟೆ ಕೆರೆ ಮಾಡಲೆಂದು ಊರ ಜನರು ಮುಂದಾಗಿ ಸಮಿತಿ ರಚಿಸಿದರು. ಅಲ್ಲಿ ನಿವೃತ್ತ ಸರ್ಕಾರಿ ನೌಕರರ ಸಂಘವಿದೆ. ವಿವಿಧ ಹುದ್ದೆಗಳಲ್ಲಿದ್ದು ಊರಿಗೆ ಮರಳಿದವರು ಅರ್ಥಪೂರ್ಣ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಆಂಜನೇಯ, ಈಶ್ವರ ದೇಗುಲಗಳನ್ನು ಸುಮಾರು 73 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿದ್ದವರು, ಈಗ ಕೆರೆ ಕೆಲಸಕ್ಕೂ ನಿವೃತ್ತರೇ ಕಾರ್ಯಪ್ರವೃತ್ತರು. ಸಂಘದ 70 ಜನ ಸದಸ್ಯರಲ್ಲಿ ಬಹುತೇಕರು 75–85 ವರ್ಷದವರು! 91 ವರ್ಷ ವಯಸ್ಸಿನ ಡಿ.ಎಚ್. ಪರಮೇಶ್ವರಪ್ಪ ಕೆರೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದರು. 6.50 ಲಕ್ಷ ರೂಪಾಯಿ ಧರ್ಮಸ್ಥಳ ಸಂಸ್ಥೆ ನೀಡಿತು. ಊರೂರು ತಿರುಗಿ ಈ ನಿವೃತ್ತರೇ 6.75 ಲಕ್ಷ ರೂಪಾಯಿ ಸಂಗ್ರಹಿಸಿ, ಹೂಳೆತ್ತಿ, ದಂಡೆಗೆ ಕಲ್ಲುಕಟ್ಟಿ ಕೆರೆಯ ಅಂದ ಹೆಚ್ಚಿಸಿದರು. ವಾಯುವಿಹಾರಕ್ಕೆ ವ್ಯವಸ್ಥೆ ಮಾಡಿ ಆರಾಮ ಕೂಡಲು ಬೆಂಚು ಹಾಕಿಸಿದರು. ಊರಲ್ಲಿ ಯುವಕರೆಲ್ಲ ಇರುವಾಗ ನಿವೃತ್ತರೇ ಮುಂದಾಗಿದ್ದು ಏಕೆ? ಪ್ರಶ್ನೆ ಹುಟ್ಟಬಹುದು. ಪಕ್ಷ, ಪಂಗಡ, ಜಾತಿಯೆಂದು ನಮ್ಮನಮ್ಮಲ್ಲಿ ಗುದ್ದಾಡುವುದಕ್ಕಿಂತ ಹಿರಿಯರ ಮಾರ್ಗದರ್ಶನದಲ್ಲಿ ಊರ ನೀರಿನ ಕೆಲಸ ನಡೆಯಲೆಂದು ಯುವಕರೇ ನಿರ್ಧರಿಸಿದ್ದರು. ಒಂದೊಂದು ರೂಪಾಯಿ ಲೆಕ್ಕವನ್ನು ಅಚ್ಚುಕಟ್ಟಾಗಿ ಬರೆದಿಡುತ್ತ ಇವರೆಲ್ಲ ನೂರ್ಕಾಲ ಉಳಿಯುವ ಕೆಂಗುಂಟೆಯ ನೀರ ನಿಧಿ ರೂಪಿಸಿದರು.

ಯಲಬುರ್ಗಾದ ಕರಮುಡಿಯ ಕೊಳವೆ ಬಾವಿಯ ನೀರು ಉಪ್ಪು. ಕುಡಿಯಲು ಕೆರೆಯ ಮಳೆ ನೀರನ್ನು ಸಾವಿರಾರು ಕುಟುಂಬಗಳು ಅವಲಂಬಿಸಿವೆ. 7 ಲಕ್ಷ ರೂಪಾಯಿಯನ್ನು ಧರ್ಮಸ್ಥಳ ಸಂಸ್ಥೆ ನೀಡಲು ಮುಂದಾಯ್ತು. ಹಳ್ಳಿಯ ಜನ ಶ್ರಮದಾನ, ವಂತಿಕೆಯಿಂದ ತಾವೂ 10 ಲಕ್ಷ ರೂಪಾಯಿ ತೊಡಗಿಸಿದರು. ಏಳು